**ದಿನಾಂಕಃ01.02.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

ನಾವು ನಮ್ಮ ಅಣ್ಣಂದಿರು ಸೇರಿ ವಾದಿಗೆ ನಿಪಿ–31 ರ ಪ್ರಕಾರ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ–31(ಸಿ) ಸಹಿಯನ್ನು ತನ್ನ ಸಹಿ ಎಂದು ಗುರುತಿಸುತ್ತಾರೆ. ಸಾಕ್ಷಿಯು ನಿಪಿ–31(ಡಿ) ಮತ್ತು (ಎಫ್) ಗಳನ್ನು ನೋಡಿ ಗುರುತಿಸಿ ಅವುಗಳು ಗಂಗಾಧರ ಎನ್ನುವವರ ಸಹಿ ಎಂದು ಹೇಳುತ್ತಾರೆ. ನಿಪಿ–31(ಇ) ಇದು ಜಿ. ಕರಿಯಣ್ಣ ರವರ ಸಹಿ ಇರಬಹುದು. ಜಿ. ಕರಿಯಣ್ಣ ಈಗ ಜೀವಂತ ಇರುವುದಿಲ್ಲ. ಅವರು ತೀರಿಕೊಂಡು ಈಗ 6–7 ವರ್ಷ ಆಗಿರುತ್ತದೆ. ಅವರು ನಮ್ಮ ಮನೆಯ ಎದುರುಗಡೆಯೇ ವಾಸವಾಗಿದ್ದರು. ಅವರಿಗೂ ನಮಗೂ ಯಾವುದೇ ದ್ವೇಷ ಇರಲಿಲ್ಲ.

ಸಾಕ್ಷಿಗೆ ನಿಪಿ–31(ಎ) ಮತ್ತು (ಬಿ) ಗಳನ್ನು ತೋರಿಸಿದ್ದು ಅದನ್ನು ಸಾಕ್ಷಿಯು ಗುರುತಿಸುವುದಿಲ್ಲ. ಮುಂದುವರಿದು ಇಂಗ್ಲೀಷ್‌ನಲ್ಲಿರುವ ಕಾರಣ ನನಗೆ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಪಿ–31 ರಲ್ಲಿ ಬರೆದ ಚೆಕ್ಕುಬಂದಿಯ ಮಧ್ಯದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮೂಲತಃ ನಮ್ಮ ತಾತನಿಗೆ ಸೇರಿದ್ದು ಪಾಲುವಿಭಾಗದಲ್ಲಿ ನಮ್ಮ ತಂದೆಗೆ ಬಂದಿರುತ್ತದೆ. ಅವರ ಮರಣಾ ನಂತರ ನಮ್ಮ ತಾಯಿಗೆ ಬಂದಿರುತ್ತದೆ. ನಮ್ಮ ತಾಯಿಯ ಮರಣಾನಂತರ ಎಲ್ಲಾ ಪ್ರತಿವಾದಿಯರಿಗೂ ಬಂದಿರುತ್ತದೆ. ನಿಪಿ–31 ರ ಪ್ರಕಾರ ನಮಗೆ ರೂ.2,31,000/– ಹಣ ಸಂದಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–31 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿ ಕ್ರಯಪತ್ರ ಆಗುವವರೆಗೂ ನಿಪಿ–31 ಚಾಲ್ತಿಯಲ್ಲಿರುತ್ತದೆ ಎಂದು ಬರವಣಿಗೆ ಆಗಿರುತ್ತದೆ ಎಂದರೆ ಅವರು ಬರೆದುಕೊಂಡಿರಬಹುದು ಆದರೆ ನಾವು ಬರೆದುಕೊಟ್ಟಿಲ್ಲ.

ನಿಪಿ–31 ರ ಪ್ರಕಾರ ದಾವಾ ಆಸ್ತಿಯ ಸ್ವಾಧೀನವನ್ನು ವಾದಿಯರಿಗೆ ಬಿಟ್ಟುಕೊಟ್ಟಿರುತ್ತದೆ ಎಂದರೆ ಸರಿಯಲ್ಲ. ನಿಪಿ–31 ರ ಪ್ರಕಾರ ನಮ್ಮ ಮತ್ತು ವಾದಿಯ ನಡುವೆ ದಾವಾ ಆಸ್ತಿಯ ಮಾರಾಟಕ್ಕಾಗಿ ಕರಾರು ಪತ್ರವಾಗಿ ನಾವೆಲ್ಲಾ ವಾದಿಯಿಂದ ಹಣ ಪಡೆದು ದಾವಾ ಆಸ್ತಿಯ ಸ್ವಾಧೀನವನ್ನು ಅವರಿಗೆ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–31 ಕ್ಕೆ ನಾನು ಬೆಂಗಳೂರಿನಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ–31 ರ ಪತ್ರ ಬರಹಗಾರರು ನಮ್ಮ ಜೊತೆ ವಿಶ್ವಾಸದಲ್ಲಿ ಇರುತ್ತಾರೆ ಎಂದರೆ ಸರಿ. ನಿಪಿ–31 ಆದ ದಿನಾಂಕದಿಂದಲೂ ಸಹ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ವಾದಿಯರ ಜಮೀನು ಇರುತ್ತದೆ. ವಾದಿಯು ಅವರ ಜಮೀನಿನ ಪಕ್ಕ ದಾವಾ ಆಸ್ತಿ ಇದ್ದ ಕಾರಣ ಅದನ್ನು ಖರೀದಿಸಲು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಜಮೀನು ನೀರಾವರಿ ಜಮೀನಾಗಿರುತ್ತದೆ. ವಾದಿಯು ದಾವಾ ಆಸ್ತಿಯಲ್ಲಿ ಸಹ ನೀರಾವರಿ ಜಮೀನನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿ ಇದ್ದು ಶೇಂಗಾ ಬೆಳೆಯುತ್ತೇವೆ ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ಹೊರತುಪಡಿಸಿ ಬೇರೆ ದಾಖಲಾತಿಗಳನುನ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನೊಬ್ಬನೇ ವ್ಯವಸಾಯ ಮಾಡುತ್ತೇನೆ.

4 ನೇ ಪ್ರತಿವಾದಿ ನಿಪಿ–31 ಬರೆದುಕೊಡುವ ದಿನಾಂಕದಂದು ಬರಲು ಅನಾನುಕೂಲವಾಗಿದ್ದರಿಂದ ಅವರು ನಿಪಿ–31 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–31 ರ ಪ್ರಕಾರ ಭವಿಷ್ಯದಲ್ಲಿ ಕ್ರಯಪತ್ರ ಬರೆದುಕೊಡಲು ಎಲ್ಲಾ ಪ್ರತಿವಾದಿಗಳು ಸಿದ್ಧರಿರುತ್ತೇವೆ ಎಂದು ವಾದಿಗೆ ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–31 ರ ಆಧಾರದ ಮೇಲೆ ವಾದಿ ಹಲವು ಬಾರಿ ನಮ್ಮನ್ನು ಕ್ರಯಪತ್ರ ಮಾಡಿಕೊಡಿ ಎಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–31 ರ ಪ್ರಕಾರ

ಕ್ರಯದ ಬಾಬ್ತು ಎಲ್ಲಾ ಹಣವನ್ನು ಪಡೆದಿದ್ದರೂ ಸಹ ವಾದಿಗೆ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಗೆ ಬರೆದುಕೊಡದೇ ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ.

ವಾದಿ ಎಲ್ಲಾ ಪ್ರತಿವಾದಿಯರಿಗೂ ಕ್ರಯಪತ್ರ ಬರೆದುಕೊಡಿ ಎಂದು ನೋಟೀಸ್ ಕಳುಹಿಸಿದ್ದರು ಎಂದರೆ ಸರಿ. ಸದರಿ ನೋಟೀಸ್‌ಗೆ ನಾವು ಉತ್ತರ ನೀಡಿರುತ್ತೇವೆ. ಉತ್ತರದಲ್ಲಿ ನಾನು ನಿಪಿ-31 ರ ಪ್ರತಿ ಕೊಡಿ ಎಂದು ಬರೆದುಕೊಟ್ಟಿರುತ್ತೇನೆ. ನಾವು 1 ರಿಂದ 3 ನೇ ಪ್ರತಿವಾದಿಯರು ಚೆನ್ನಾಗಿರುತ್ತೇವೆ. 4 ನೇ ಪ್ರತಿವಾದಿ ನಮ್ಮ ಜೊತೆ ಚೆನ್ನಾಗಿರುವುದಿಲ್ಲ. ವಾದಿ ಎಲ್ಲಾ ಪ್ರತಿವಾದಿಯರಿಗೂ ಸಹ ಲೀಗಲ್ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸ್‌ಗೆ 1 ಮತ್ತು 4 ನೇ ಪ್ರತಿವಾದಿಯರು ಉತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 4 ನೇ ಪ್ರತಿವಾದಿಯರು ತಮ್ಮ ಉತ್ತರದಲ್ಲಿ ನಾವು ಕ್ರಯಪತ್ರ ಬರೆದುಕೊಡಲು ಬದ್ಧರಾಗಿರುತ್ತೇವೆ ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯನ್ನು ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಕರಾರು ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ಒಟ್ಟು 5 ಜಮೀನುಗಳು ಇರುತ್ತವೆ. ಅದರ ಒಟ್ಟು ವಿಸ್ತೀರ್ಣ ಅಂದಾಜು 24 ಎಕರೆ ಬರುತ್ತದೆ. ನಾನೊಬ್ಬನೇ ಹರಿಯಬ್ಬೆಯಲ್ಲಿ ವಾಸವಾಗಿರುತ್ತೇನೆ. ಉಳಿದ ಪ್ರತಿವಾದಿಯರು ಬೆಂಗಳೂರಿನಲ್ಲಿ ವಾಸಾಗಿರುತ್ತಾರೆ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ವ್ಯವಹಾರ ನಾನೇ ಮಾಡುತ್ತೇನೆ. 2008 ರ ವರೆಗೆ ಎಲ್ಲಾ ಆಸ್ತಿಗಳಲ್ಲಿ ನಾವೇ ಸ್ವಾಧೀನದಲ್ಲಿ ಇದ್ದೆವು ಎಂದರೆ ಸಾಕ್ಷಿಯು ಈಗಲೂ ಸಹ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ಹೇಳುತ್ತಾರೆ.

ನಮ್ಮ ಕುಟುಬಂದ ಆಸ್ತಿಗಳಲ್ಲಿ ಸರ್ವೆ ನಂಬರ್ಃ 50 ಮತ್ತು 57/3 ನೀರಾವರಿ ಜಮೀನು ಇರುತ್ತವೆ. ಉಳಿದ ಜಮೀನುಗಳು ಖುಷ್ಕಿ ಜಮೀನುಗಳಾಗಿರುತ್ತವೆ. ಸದರಿ ಎರಡು ಜಮೀನುಗಳಲ್ಲಿ

ಬೋರು ಕೊರೆಸಲು ನಾನೇ ಹಣ ಹಾಕಿರುತ್ತೇನೆ. ಬೋರುಗಳಲ್ಲಿ ನೀರು ಬಾರದೇ ಮತ್ತು ಮಳೆಯೂ ಬಾರದೇ ವ್ಯವಸಾಯದಲ್ಲಿ ನಷ್ಟ ಆಗಿರುತ್ತದೆ ಎಂದರೆ ಸರಿ. ಆಗ ವ್ಯವಸಾಯ ಮಾಡಲು ಮತ್ತು ಹೊಸದಾಗಿ ಬೋರು ಹಾಕಿಸಲು ಹಣದ ಅವಶ್ಯಕತೆ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯೂ ಸಹ ತನ್ನ ಬಳಿ ಹಣ ಇಲ್ಲ ಎಂದು ಹೇಳಿ ನಾವೆಲ್ಲರೂ ಸೇರಿ ದಾವಾ ಆಸ್ತಿಯನ್ನು ಮಾರಲು ನಿರ್ಧರಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿಯೇ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ–ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.